ಶ್ರೀ ಡಿ. ದೇವರಾಜ ಅರಸ್.—ಆ ಪ್ರಾವಿಷ್ಕ ಇದ್ದಮೇಲೆ, ಜಮೀನಿದ್ದಮೇಲೆ ಏಕೆ ಮಿಲಟರಿಯವರು ಅದನ್ನು ಉಪಯೋಗಿಸಿಕೊಳ್ಳುತ್ತಿಲ್ಲ ?

ಶ್ರೀ ಎ ಜಿ. ರಾಮಚಂದ್ರರಾವ್.—ಅವರಿಗೆ ಟ್ರೌನುಗಳಲ್ಲಿರಲು ಇಷ್ಟವಿದೆಯೇ ಹೊರತು ಜಮೀನಿನಲ್ಲಿ ಸೆಟ್ಲ್ ಆಗಲು ಇಷ್ಟವಿಲ್ಲ ಎಂದು ಕಾಣುತ್ತದೆ.

ಶ್ರೀ ಪಿ. ಆರ್. ರಾಮಯ್ಯ.—ಮೈಸೂರು ಸೈನಿಕರ ಬೋರ್ಡಿನಲ್ಲಿ ಫಂದು ಎಷ್ಟಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಪಿ. ಆರ್. ರಾಮಯ್ಯ.—ಇಂಡಿಯಾ ಸರ್ಕಾರದವರೂ ಕಾಂಟ್ರಿಬ್ಯೂಟ್ ಮಾಡುತ್ತಿರುವರೆ ?

Sri A. G. RAMACHANDRA RAO.—I think part of it is contributed by the Government of India.

ಶ್ರೀ ಪಿ. ಆರ್. ರಾಮಯ್ಯ.—ಈಗ ಡಿಸ್ಚಾರ್ಜ್ಡ್ ಸೈನಿಕರ ಯೋಗಕ್ಷೇಮ ನೋಡಿಕೊಳ್ಳಲು ಯಾವುದಾದರೂ ಆರ್ಗನೈಜೇಷನ್ ನಂಸ್ಥಾನದಲ್ಲಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ರಿಕ್ಷಾ ಆರ್ಗನೈಜೇಷನ್ ಕೋ-ಆಪರೇಟಿವ್ ಬೇಸಿಸ್‌ಮೇಲೆ ಇದೆ.

ಶ್ರೀ ಪಿ. ಆರ್. ರಾಮಯ್ಯ.—ಅವರಿಗಾಗಿ ಒಂದು ಕೋ-ಆಪರೇಟಿವ್ ಸೊಸೈಟಿಯಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಂದು ಬೋರ್ಡ್ ಇದೆ.

ಶ್ರೀ ಪಿ. ಆರ್. ರಾಮಯ್ಯ —ಅದಕ್ಕೆ ಛೇರ್ಮನ್ ಯಾರು ?

Sri A. G. RAMACHANDRA RAO.—I think the concerned Minister is the Chairman, Sir.

QUESTIONS FOR ANSWERS ON THE DAY.

(but not taken up)

Municipal High Schools.

Q.—631. Sri D. M. GOVINDARAJU (Nelamangala).—

Will the Government be pleased to state :—

(*a*) the number of Municiple High Schools in the State (districtwar figures to be supplied).;.

(*b*) the number of students studying in the said High Schools and out of them the number coming from the rural areas and the number from the Mnnicipal areas ;

(*c*) whether the District Boards have contributed anything towards the maintenance of these Municipal High Schools ; if so, the extent of help and the names of schools so helped ?

A.—Sri A. G. RAMACHANDRA RAO (Minister for Law and Education).—

(*a*), (*b*) and (*c*) Please see Statement appended below.

STATEMENT.

Serial No.	Name of District	Number of Municipal High Schools	Number of pupils coming from rural areas.	Number of pupils coming from Municipal areas.	Contribution from District Board
		Rs.	Rs.	Rs.	
1	Bangalore ...	10	1,745	1,412	Nil
2	City District, Bangalore.	2	15	672	Nil
3	Civil Area ...	1	133	93	Nil
4	Tumkur ...	4	725	428	Nil
5	Hassan ...	7	683	859	Nil
6	Shimoga ...	8	434	1,703	Nil
7	Chitaldrug ...	8	1,005	839	Nil
8	Bellary ...	3	287	2,446	Nil
9	Mandya ...	6	153	1,541	During 54-55 the District Board, Mandya, has sanctioned Rs. 1,000 to the Municipal High School, Srirangapatna, and Rs. 1,000 to the Municipal High School, Malavalli.

(SRI A. G. RAMACHANDRA RAO.)

STATEMENT—(*contd.*)

Serial No.	Name of District	Number of Municipal High Schools	Number of pupils coming from rural areas	Number of pupils coming from Municipal areas	Construction from District Board
		Rs.	Rs.	Rs.	
10	Kolar ...	6	853	2,189	Rs. 100 per mensem to the Municipal High School, Malur.
11	Mysore ...	6	866	894	Nil
12	Chikmagalur ...	4	153	633	Municipal High School, Koppa : Rs. 500 per annum. Municipal High School, Kadur : Rs. 500 per annum. Municipal High School, Tarikere : Rs. 500 per annum. Municipal High School, Birur : Rs. 500 per annum.

MOTOR VEHICLES (MYSORE AMENDMENT) BILL, 1955.

Motion to consider (contd.)

* ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಈ ಮೋಟಾರು ವಾಹನಗಳ ತಿದ್ದುಪಡಿ ಮಸೂದೆಯಲ್ಲಿ ಕೇವಲ ಎರಡು ತಿದ್ದುಪಡಿಗಳು ಮಾತ್ರ ಇವೆ. ಮೊದಲನೆಯ ತಿದ್ದುಪಡಿ ಎರಡನೆಯ ಕ್ಲಾಜಿನಲ್ಲಿ ಈ ರೀತಿಯಾಗಿ ನಮೂದಿಸಲ್ಪಟ್ಟಿದೆ :

"2. *Amendment of Section 62 of Central Act IV of 1939.*—After clause (*c*) of Section 62 of the Motor Vehicles Act, 1939 (hereinafter referred to as the principal Act), the following word and clause shall be inserted, namely :—

"or

(*d*) pending the decision on an application for the grant or renewal of a stage carriage permit or a public carrier's permit or pending the decision of an appellate authority under Section 64."

ಹೊಳಕಾಲ್ಮೂರು ಸದಸ್ಯರು ಈ ವಿಷಯದಲ್ಲಿ ಪ್ರಸ್ತಾಪ ಮಾಡಿ ಕೆಲವು ವಿಚಾರ ಹೇಳಿದ್ದಾರೆ. ಈಗಿರತಕ್ಕಂಥ ಸೆಕ್ಷನ್‌ನಲ್ಲಿ ಸರ್ಕಾರಕ್ಕೆ ಸಾಕಷ್ಟು ಅಧಿಕಾರವಿದೆ; ಎಮರ್ಜೆನ್ಸಿ ಬಂದಾಗ, ಅವಸರದ ಸಂದರ್ಭದಲ್ಲಿ ತಾತ್ಕಾಲಿಕವಾಗಿ ವಾಹನಗಳನ್ನು ಓಡಿಸುವುದಕ್ಕೆ ಪರ್ಮಿಟ್ ಕೊಡಬಹುದೆಂದಿದೆ; ಇದು ಸಾಲದು; ಇದಕ್ಕೆ (*d*) ಉಪನಿಧಿಯನ್ನು ಸೇರಿಸಬೇಕು ಎಂದು ಸರ್ಕಾರದವರು ಅಭಿಪ್ರಾಯಪಟ್ಟಿದ್ದಾರೆ. ಹಾಗೆ ಅಭಿಪ್ರಾಯಪಡುತ್ತಾ ಅವರು ಕಾರಣಗಳನ್ನು ಹೇಳುವ ಕಡೆಯಲ್ಲಿ 62ನೆಯ ಸೆಕ್ಷನ್ ಪ್ರಕಾರ :

"At present, Section 62 of the Motor Vehicles Act does not empower the transport authorities or appellate authorities to grant temporary permits in deserving cases pending disposal of applications for grant of renewal of permits or during the pendency of appeal."

ಎಂದು ಹೇಳಿದ್ದಾರೆ. ಡಿಸರ್ವಿಂಗ್ ಕೇಸಸ್ ಇದ್ದರೆ ಇದರಲ್ಲಿರುವ ಹಾಗೆ ಎಮರ್ಜೆನ್ಸಿಯಲ್ಲಿ ಯಾರಿಗೆ ಬೇಕಾದರೂ ಅವಕಾಶ ಕೊಡಬಹುದು. ಈಗ ನಾನು ನೋಡಿರುವಹಾಗೆ ಹಿಂದಿನಿಂದ ಸಾಮಾನ್ಯವಾಗಿ ಅಮಲ್ದಾರರು ಒಂದು ಲೈನಿಗೆ ಟೆಂಪೊರೆರಿಯಾಗಿ ಪರ್ಮಿಟ್ ಕೊಡುತ್ತಾರೆ. ಅದರಂತೆ ಎರಡು-ಮೂರು ತಿರಗಳು ಓಡ್ಡಾಡಿನುವುದು ಒಂದು ರಸ್ತೆ ಬಿಟ್ಟು ಬೇರೊಂದು ರಸ್ತೆಯಲ್ಲಿ ಪುರು ಮಾಡುವುದು ಹೀಗೆ ಮಾಡಿ ಒಬ್ಬ ಮನುಷ್ಯನು ಹಂಗಾಮಿಯಾಗಿ ತಾತ್ಕಾಲಿಕವಾಗಿ ಕೆಲವು ಕಾಲ ತಳ್ಳುತ್ತಾನೆ. ಇದರಿಂದ ರೆಗ್ಯುಲರ್ ಸರ್ವಿಸ್ ಇಟ್ಟುಕೊಂಡಿರುವವರಿಗೆ ಅನೇಕ ವೇಳೆ ತೊಂದರೆಯಾಗುವುದುಂಟು. ಆಮೇಲೆ ಟೆಂಪೊರೆರಿ ಬಸ್ ಲೈನನ್ನು ಟ್ರಾನ್ಸ್‌ಪೋರ್ಟ್ ಅಥಾರಿಟಿ, ಸಂಬಂಧಪಟ್ಟ ಅಧಿಕಾರಿಗಳು ಮುಂತಾದ